ಒಬ್ಬರೇ ಮತ್ತು ಬಿಲ್ಡಿಂಗ್ ಕ್ಲರ್ಕ್ ಒಬ್ಬರು ಸುಮಾರು ೧೫ ವರ್ಷಗಳಿಂದಲೂ ಅಲ್ಲೇ ಕೆಲಸ ಮಾಡುತ್ತಿದ್ದಾರೆ. ಒಂದು ಲೈಸೆನ್ಸ್‌ನ್ನು ಕೊಡಬೇಕಾದರೆ ಇವರು ೫೦೦ ರೂಪಾಯಿಗಳ ಲಂಚ ಕೇಳುತ್ತಾರೆ. ಮಾನ್ಯ ಸಚಿವರು ಇವರ ಬಗ್ಗೆ ತನಿಖೆ ಮಾಡಿದರೆ ಈ ಅಧಿಕಾರಿಗಳ ವಿಚಾರದಲ್ಲಿ ನಿಜಾಂಶ ಏನು ಎಂದು ಬೆಳಕಿಗೆ ಬರುವುದಕ್ಕೆ ಸಾಧ್ಯತೆ ಉಂಟು. ತಾವು ಈ ಕಡೆ ಗಮನ ಹರಿಸಿ ಈ ಅಧಿಕಾರಿಗಳನ್ನು ಕಿತ್ತು ಹಾಕುತ್ತೀರಾ ? ಇನ್ನೊಬ್ಬ ಹೆಲ್ತ್ ಇನ್ಸ್‌ಪೆಕ್ಟರ್ ಕೂಡ ಐದಾರು ವರ್ಷಗಳಿಂದ ಅಲ್ಲೇ ಇದ್ದಾರೆ. ಇವರುಗಳನ್ನು ಬೇರೆ ಕಡೆ ವರ್ಗ ಮಾಡಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೇ, ಒಬ್ಬರು ಇನ್ಸ್‌ಪೆಕ್ಟರ್ ಎಂದು ಹೇಳಿದ್ದಾರೆ, ಇನ್ನೊಬ್ಬರು ಕ್ಲರ್ಕ್ ಎಂದು ಹೇಳಿದ್ದಾರೆ. ಅವರು ಹೆಸರುಗಳನ್ನು ಹೇಳಿದರೆ ಅವರ ಮೇಲೆ ತನಿಖೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ಅವರ ಹೆಸರನ್ನು ಇಲ್ಲಿ ಹೇಳುವುದಕ್ಕೆ ಆಗದೇ ಇದ್ದರೆ ಪತ್ರದ ಮೂಲಕ ಬರೆದು ತಿಳಿಸಿದರೂ ನಾನು ತನಿಖೆಯನ್ನು ಮಾಡಿಸುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ನಾನು ಈಗಲೇ ನಿಮಗೆ ಬಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಶ್ರೀಮತಿ ಸುಮಾ ವಸಂತ್‌ರವರ ಪರವಾಗಿ ಶ್ರೀಮತಿ ಮನೋರಮ ಮಧ್ವರಾಜ್‌ರವರು ಪ್ರಶ್ನೆಯನ್ನು ಕೇಳಿ.

ರಾಜ್ಯದಲ್ಲಿರುವ ಯುವಜನ ಕೇಂದ್ರಗಳು

೧೬೭೧. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).—ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಯುವಜನ ಕೇಂದ್ರಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಇವುಗಳ ಪೈಕಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಜನ ಕೇಂದ್ರಗಳೆಷ್ಟು ? ಜಿಲ್ಲಾವಾರು ವಿವರ ಒದಗಿಸುವುದು?

ಇ) ಇವುಗಳ ಚಟುವಟಿಕೆಗಾಗಿ ಸರ್ಕಾರದವರು ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ೧೯ ಜಿಲ್ಲಾ ಯುವಕ ಕೇಂದ್ರ ಮತ್ತು ಒಂದು ರಾಜ್ಯ ಯುವಕ ಕೇಂದ್ರ

ಆ) ಇಲ್ಲ

ಯುವ ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಸ್ಥಾಪಿಸಲಾಗಿದೆ.

ಇ) ಉದ್ಭವಿಸುವುದಿಲ್ಲ

ಶ್ರೀಮತಿ ಮನೋರಮ ಮಧ್ವರಾಜ್ (ಶ್ರೀಮತಿ ಸುಮಾ ವಸಂತ್ ಪರವಾಗಿ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಒಂದು ಯೋಜನೆಗೆ ಕೇಂದ್ರ ಸರ್ಕಾರದಿಂದ ಬರುವ ಅನುದಾನ ಎಷ್ಟು ? ಈ ಯೋಜನೆಯಿಂದ ಗ್ರಾಮಾಂತರ ಪ್ರದೇಶಗಳ ಎಷ್ಟು ಯುವಕರುಗಳಿಗೆ ಪ್ರಯೋಜನ ದೊರಕಿದೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈ ವಿವರವನ್ನು ಮಾನ್ಯ ಸದಸ್ಯರಿಗೆ ನಾನು ಕೊಟ್ಟು ಕಳುಹಿಸುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಜನ ಕೇಂದ್ರಗಳೆಷ್ಟು ಎಂದು ಕೇಳಿದ್ದಕ್ಕೆ, ತಾವು ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಯುವ ಜನ ಕೇಂದ್ರಗಳು ಏಕೆ ಇಲ್ಲ ? ಅಲ್ಲಿ ಯುವ ಜನರು ಇಲ್ಲವೆ? ಯುವ ಜನ ಇಲಾಖೆ ವತಿಯಿಂದ ಯುವಕ ಕೇಂದ್ರಗಳಿಗೆ ೩ ಲಕ್ಷ ಚಿಲ್ಲರೆ ಹಣವನ್ನು ಖರ್ಚು ಮಾಡಲಾಗಿದೆಯೆಂದು ನಮಗೆ ತಿಳಿದು ಬಂದಿದೆ. ರಾಜ್ಯದಲ್ಲಿರುವ ಎಲ್ಲಾ ಯುವ ಜನ ಕೇಂದ್ರಗಳಿಗೂ ಸೇರಿ ನೀವು ೩ ಲಕ್ಷ ಚಿಲ್ಲರೆ ಹಣವನ್ನು

ಖರ್ಚು ಮಾಡಿದರೆ ಸಾಕೆ? ಆವೇಲೆ ನೆಹರು ಯುವಕ ಕೇಂದ್ರ ಎಂದು ಮಾಡಿದ್ದೀರಿ. ಈ ಕೇಂದ್ರಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸದಸ್ಯರ ಈ ಪ್ರಶ್ನೆ ಮೂಲ ಪ್ರಶ್ನೆಗೆ ಸಂಬಂಧಿಸುವುದಿಲ್ಲ. ಆದರೂ ನಾನು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಯುವಕ ಕೇಂದ್ರಗಳನ್ನು ತೆಗೆಯುವುದಕ್ಕೆ ಬರುವುದಿಲ್ಲ. ಬರೀ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ತೆಗೆಯುವುದಕ್ಕೆ ಬರುತ್ತದೆ.

ಶ್ರೀ ಮುದಸಗೋಪಾಲ ನಾಯಕ್.—ಹೋಗಲಿ, ತಾಲ್ಲೂಕು ಮಟ್ಟದಲ್ಲಿ ಎಷ್ಟು ಯುವಕ ಕೇಂದ್ರಗಳು ಇವೆ? ಹಾಗೂ ಎಷ್ಟು ಜನ ಯುವಕರು ಇದರಿಂದ ಲಾಭ ಪಡೆದಿದ್ದಾರೆ ಎಂದು ತಿಳಿಸಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಯುವಜನ ಕಲ್ಯಾಣ ಕೇಂದ್ರಗಳಿಂದ ಒಟ್ಟು ೧೦ ಸಾವಿರ ಯುವಕರು ಪ್ರಯೋಜನ ಪಡೆದಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಎಷ್ಟು ಯುವ ಜನ ಕೇಂದ್ರಗಳು ಇವೆ ಎಂಬುದರ ಬಗ್ಗೆ ಅದರ ಸಂಖ್ಯೆಯನ್ನು ಕೊಟ್ಟು ಕಳುಹಿಸುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಯಾವುದನ್ನು ಕೇಳಿದರೂ ತರಿಸಿಕೊಡುತ್ತೇನೆಂದು ಹೇಳುತ್ತಾರೆ.

೨–೩೦ ಪಿ. ಎಂ.

ಉಪಾಧ್ಯಕ್ಷರು.—ದಯವಿಟ್ಟು ತಾವುಗಳು ನೇರವಾಗಿ ಪ್ರಶ್ನೆಯನ್ನು ಕೇಳಿ. ?

ಶ್ರೀ ಗೋಪಾಲ ಮುಕುಂದ ಕಾನಡೆ.—ನಾವು ಯಾವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಿದರೂ ಕೂಡ ತರಿಸಿ ಕೊಡುತ್ತೇವೆ ಎಂದು ಉತ್ತರ ಕೊಡುತ್ತಾರೆ. ಹೀಗೆ ಹೇಳುವುದಾದರೆ ನಾವು ಪ್ರಶ್ನೆಗಳನ್ನು ಕೇಳುವ ಉದ್ದೇಶ ಏನು ?ಇಪ್ಪರು ಇರುವುದು ಏಕೆ ?ಇವರ ಅಧಿಕಾರಿಗಳು ಇರುವುದು ಏತಕ್ಕೆ?

ಉಪಾಧ್ಯಕ್ಷರು.—ಅವರು ನಿಮ್ಮ ಪ್ರಶ್ನೆಗೆ ಏನು ಹೇಳಬೇಕೋ ಅದನ್ನು ಹೇಳಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಅವರು ಕೊಟ್ಟ ಉತ್ತರವನ್ನು ತಾವುಗಳು ಸ್ವಲ್ಪ ಓದಿ ನೋಡಿ. ಆದರಿಂದ ಸಾರ್ವಜನಿಕರಿಗೆ ಏನಾದರೂ ಉಪಯೋಗವಾಗುತ್ತದೆಯೇ ಎಂದು ನೋಡಿ.

ಉಪಾಧ್ಯಕ್ಷರು.—ದಯವಿಟ್ಟು ನೀವು ಕುಳಿತುಕೊಳ್ಳಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಮಗೆ ಸರಿಯಾದ ಉತ್ತರ ಬೇಕು.

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ನಾನು ಸರಿಯಾದ ಮತ್ತು ನೇರವಾದ ಉತ್ತರವನ್ನು ಹೇಳಿದ್ದೇನೆ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅಧ್ಯಕ್ಷರೆ ತಾಲ್ಲೂಕು ಮಟ್ಟದಲ್ಲಿ ಸಹಾಯಕ ಯುವಜನ ಸೇವಾ ಅಧಿಕಾರಿ ಎಂದು ಇರುತ್ತಾರೆ. ಹೀಗೆ ರಾಜ್ಯದಲ್ಲಿರತಕ್ಕಂಥ ೧೭೬ ತಾಲ್ಲೂಕುಗಳಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಈ ಮೇಲೆ ಹೇಳಿದ ಅಧಿಕಾರಿಗಳು ಇಲ್ಲ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಈ ಅಧಿಕಾರಿಗಳು ಇಲ್ಲ ಎಂದು ಹೇಳಬೇಕು.

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಯು ಇದಕ್ಕೆ ನೇರವಾಗಿ ಸಂಬಂಧ ಪಡುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ತಾವುಗಳು ಪಟ್ಟಣದಲ್ಲಿ ಯುವ ಜನರಿಗೋಸ್ಕರವಾಗಿ ಶಿಬಿರಗಳನ್ನು ಏರ್ಪಡಿಸುತ್ತೀರಿ. ಅದಕ್ಕಾಗಿ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟರೆ ಅದರಿಂದ ಯಾವ ರೀತಿಯಲ್ಲಿ ಅಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆ ? ಆ ಮೊತ್ತವನ್ನು ಮುಂದಾದರೂ ಹೆಚ್ಚಿಗೆ ಮಾಡುತ್ತೀರಾ ?

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾನ್ಯ ಸದಸ್ಯೆಯವರು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಆ ಮೊತ್ತವನ್ನು ಹೆಚ್ಚಿಗೆ ಮಾಡುವ ವಿಚಾರದಲ್ಲಿ ಪ್ರಯತ್ನ ಮಾಡುತ್ತೇನೆ.